ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
6 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 29 ॥ ಸಂಚಿಕೆ : 04॥ UDP/1263/2018-20 || R.NO.50495/91 ॥ ತಾರೀಕು : 19–02–2019 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

# ಉಗ್ರರ ವಿರುದ್ಧ ಸರ್ವರ ಆಕ್ರೋಶ
# ಹುತಾತ್ಮ ಯೋಧರಿಗೆ ಹಳ್ಳಿಹಳ್ಳಿಗಳಲ್ಲೂ ನಮನ






**ಬಸ್ಸಿನಲ್ಲಿ ಪ್ರಯಾಣಿಸುವಾಗ ಉಗ್ರರ ದಾಳಿಯಲ್ಲಿ ಹುತಾತ್ಮರಾದ ವೀರಯೋಧರಿಗೆ ಗೌರವಪೂರ್ಣ ನಮನ ಸಾರ್ವಜನಿಕರು ಹಳ್ಳಿಹಳ್ಳಿಗಳಲ್ಲಿ ವ್ಯಕ್ತಪಡಿಸುತ್ತಿರುವುದು ಕಂಡುಬಂತು. ಮೊಂಬತ್ತಿ ಉರಿಸಿ ಹುತಾತ್ಮ ಯೋಧರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಿದ್ದಾರೆ.**

ಜಮ್ಮು ಕಾಶ್ಮೀರದಲ್ಲಿ ಪುಲ್ವಾಮಾದಲ್ಲಿ ಉಗ್ರರ ದಾಳಿಯುಲ್ಲಿ ಹುತಾತ್ಮರಾದ ಯೋಧರಿಗೆ ಕಣ್ಣೀರಿನ ಶ್ರದ್ಧಾಂಜಲಿ ಅರ್ಪಿಸಿದ ಸಾರ್ವಜನಿಕರು ಪಾಕಿಸ್ತಾನ ಹಾಗೂ ಪಾಕ್ ಪ್ರೇರಿತ ಉಗ್ರರ ಬಗ್ಗೆ ತೀವ್ರ ಆಕ್ರೋಶ ವ್ಯಕ್ತ ಪಡಿಸಿದ್ದಾರೆ. ಈ ವಿಷಯದಲ್ಲಿ ಎಲ್ಲಾ ಸಂಘ ಸಂಸ್ಥೆಗಳು ಒಂದಾಗಿದ್ದು, ಹಲವು ರೀತಿಯಲ್ಲಿ ಹುತಾತ್ಮ ಯೋಧರಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ಕುಂದಾಪುರದಲ್ಲಿ ಹಲವು ಸಂಘಟನೆಗಳು ಸೇರಿ ಶಾಸ್ತ್ರಿ ವೃತ್ತದಲ್ಲಿ ಮೇಣದ ಬತ್ತಿ ದೀಪ ಬೆಳಗಿಸಿ, ಶ್ರದ್ಧಾಂಜಲಿ ಅರ್ಪಿಸಿದರೆ, ಖಾರ್ವಿಕೇರಿಯ ವಿದ್ಯಾರಂಗ ಮಿತ್ರಮಂಡಳಿ ನೇತೃತ್ವದಲ್ಲಿ ಭಾರಿ ಸಂಖ್ಯೆಯ ಜನರು ಮೆರವಣಿಗೆಯಲ್ಲಿ ಸಾಗಿ ಹುತಾತ್ಮ ವೀರಯೋಧರಿಗೆ ನಮನ ಸಲ್ಲಿಸಿದರು. ವಯಸ್ಕರು, ಮಹಿಳೆಯರು, ಮಕ್ಕಳು ಎಲ್ಲರೂ ಪಾಲ್ಗೊಂಡಿದ್ದರು. ಹಳ್ಳಿಹಳ್ಳಿಗಳಲ್ಲಿ ವಿವಿಧ ಸಂಘ ಸಂಸ್ಥೆಗಳೂ ನಮನ ಸಲ್ಲಿಸಿವೆ.

ಸಾರ್ವಜನಿಕ ವಲಯುದಲ್ಲಿ ವಿದ್ಯಾರ್ಥಿಗಳು, ಯುವಕರು, ಹಿರಿಯರು ಎಲ್ಲರೂ ತೀವ್ರ ಆಕ್ರೋಶ ವ್ಯಕ್ತ ಪಡಿಸುತ್ತಿದ್ದು, ಹೋಟೆಲ್, ಬಸ್, ಕಛೇರಿಗಳು, ವ್ಯಾಪಾರ ಮಳಿಗೆಗಳು ಎಲ್ಲ ಕಡೆ ಇದೇ ವಿಷಯದಲ್ಲಿ ಚರ್ಚೆ, ಆಕ್ರೋಶ ವ್ಯಕ್ತವಾಗುತ್ತಿವೆ. ಎಲ್ಲರೂ ಭಾರತ ಯಾವ ರೀತಿಯಲ್ಲಿ ಉಗ್ರರನ್ನು ಪೋಷಿಸುವ ಪಾಕಿಸ್ತಾನವನ್ನು ಮಟ್ಟ ಹಾಕುತ್ತದೆ ಎಂದು ಕಾತರದಿಂದ ಕಾಯುತ್ತಿದ್ದಾರೆ.

ವಾಟ್ಸ್‌ಆ್ಯಪ್‌ಗಳಲ್ಲಂತೂ ಯುವ ಜನರ ಆಕ್ರೋಶ ಕಳೆದ ಒಂದು ವಾರದಿಂದಲೂ ವಿವಿಧ ರೀತಿಯುಲ್ಲಿ ಪ್ರಕಟವಾಗುತ್ತಿದೆ. ಉಗ್ರರನ್ನು ಪೋಷಿಸುವ, ಪ್ರಚೋದಿಸುವವರು, ಉಗ್ರ ಸಂಘಟನೆಗೆ ತಮ್ಮ ಮಕ್ಕಳನ್ನು ಕಳುಹಿಸುವವರು, ಯೋಧರಿಗೆ ಕಲ್ಲು ಹೊಡೆದು ಸತಾಯಿಸುವವರೂ ವಾಟ್ಸ್ ಆ್ಯಪ್, ಇಂಟರ್‌ನೆಟ್‌ಗಳಲ್ಲಿ ಉಗ್ರ ವಾದವನ್ನು ಪ್ರೋತ್ಸಾಹಿಸುವವರು ಎಲ್ಲರನ್ನೂ ನಾಶಪಡಿಸಬೇಕೆಂಬ ಒಕ್ಕೊರಲ ಮನವಿ ಮಾಡಲಾಗುತ್ತಿದೆ. ಪಕ್ಷಭೇದ ಮರೆತು ಎಲ್ಲ ಸಂಘಟನೆಗಳು ಹಳ್ಳಿ ಹಳ್ಳಿಗಳಲ್ಲಿ ಮೊಂಬತ್ತಿ ಬೆಳಗಿ ಸಾರ್ವಜನಿಕವಾಗಿ ಮೃತ ಯೋಧರಿಗೆ ತಮ್ಮ ಶ್ರದ್ಧಾಂಜಲಿ ಅರ್ಪಿಸಿದರು.

"ವ್ಯರ್ಥವಾಗದು ಬಲಿದಾನ" ಎನ್ನುತ್ತಾ ಹುತಾತ್ಮರಿಗೆ ನಮನ ಸಲ್ಲಿಸುವಲ್ಲಿ ತೋರಿದ ಏಕತೆ ಒಗ್ಗಟ್ಟು ಅಪೂರ್ವವಾಗಿತ್ತು.




ಪುಲ್ವಾನದಲ್ಲಿ ಭಾರತದ ಸೈನಿಕರ ಸಾವಿಗೆ ಪ್ರೇರಣೆ ನೀಡಿದ ಉಗ್ರರ ಬೆನ್ನಟ್ಟುತ್ತಿರುವ ಭಾರತೀಯ ಸೈನಿಕರು ಮಹತ್ವದ ಯಶಸ್ಸನ್ನು ಸಾಧಿಸಿದ ಸುದ್ದಿ ಸೋಮವಾರ ಬೆಳಿಗ್ಗೆಯಿಂದ ಮಾಧ್ಯಮಗಳಲ್ಲಿ ಪ್ರಸಾರವಾಗ ತೊಡಗಿತು. ಸೈನಿಕರ ಸಾವಿನಿಂದ ಆಕ್ರೋಶಗೊಂಡಿದ್ದ ಸಾರ್ವಜನಿಕರಿಗೆ ಈ ಸುದ್ದಿ ಖುಶಿನೀಡಿತು. ಇಂತಹ ಕಾರ್ಯಾಚರಣೆಯನ್ನು ಇನ್ನಷ್ಟು ಮುಂದುವರಿಸಿ ಉಗ್ರರನ್ನು ಬೆಂಬಲಿಸುವವರನ್ನು ಮಟ್ಟಹಾಕಬೇಕೆಂಬ ಕೂಗು ಕೇಳಿಬಂದಿದೆ.

## ಸೈನಿಕರ ಕ್ಷೇಮಾಭಿವೃದ್ಧಿಗೆ
## ಡಾ|ಜಿ.ಶಂಕರ್ ಅವರಿಂದ 25 ಲಕ್ಷ ರೂ.ಕೊಡುಗೆ




ಪುಲ್ವಾಮಾ ಘಟನೆಯಲ್ಲಿ ಹುತಾತ್ಮರಾದ ದೇಶದ ಸೈನಿಕರ ಕುಟುಂಬಗಳಿಗೆ ಆಗಿರುವ ಆಘಾತವನ್ನು ಪರಿಗಣಿಸಿರುವ "ಡಾ|ಜಿ.ಶಂಕರ್ ಫ್ಯಾಮಿಲಿ ಟ್ರಸ್ಟ್" ಪ್ರವರ್ತಕ ಡಾ|ಜಿ.ಶಂಕರ್ 25 ಲಕ್ಷ ರೂ ಚೆಕ್‌ನ್ನು ಸೈನಿಕರ ಕ್ಷೇಮಾಭಿವೃದ್ಧಿಗೆ ಜಿಲ್ಲಾಧಿಕಾರಿಗಳ ಮೂಲಕ ಕಳುಹಿಸಿಕೊಟ್ಟಿದ್ದಾರೆ.


